**ಕರ್ನಾಟಕ ಸರ್ಕಾರ**

**(ಸಾರ್ವಜನಿಕ ಶಿಕ್ಷಣ ಇಲಾಖೆ)**

**ಕರ್ನಾಟಕ ಪಠ್ಯ ಪುಸ್ತಕ ಸಂಘ(ರಿ)**


ದೂರವಾಣಿ ಸಂಖ್ಯೆ:080 – 26422238 / 45
ಫ್ಯಾಕ್ಸ್: 26421299
ಇ ಮೇಲ್: ddpiktbs@gmail.com
ವೆಬ್‌ಸೈಟ್:http://www.schooleducation.kar.nic.in

ಕರ್ನಾಟಕ ಪಠ್ಯ ಪುಸ್ತಕ ಸಂಘ(ರಿ)
ನಂ.4.ಡಿ.ಎಸ್.ಇ.ಆರ್.ಟಿ ಕಟ್ಟಡ,
100 ಅಡಿ ವರ್ತುಲ ರಸ್ತೆ,ಬನಶಂಕರಿ 3ನೇ ಹಂತ,
ಬೆ□ಳೂರು-560085.


ಸಂಖ್ಯೆ:ಎ7/ಕಪಪುಸಂ/2015–16ನೇ ಪ.ಪು.ಮು.ಟೆಂ./ಬೇಡಿಕೆ/01/14–15 ದಿನಾಂಕ:28–7–2014

**ಸುತ್ತೋಲೆ**

**ವಿಷಯ: 2015–16ನೇ ಸಾಲಿನ ಉಚಿತ ಮತ್ತು ಮಾರಾಟ ಪಠ್ಯ ಪುಸ್ತಕಗಳ ಬೇಡಿಕೆ ಸಲ್ಲಿಸುವ ಬಗ್ಗೆ.**

*****

ವಿಷಯದನ್ವಯ 2015–16ನೇ ಸಾಲಿಗೆ ಪಠ್ಯ ಪುಸ್ತಕಗಳ ಬೇಡಿಕೆಗೆ ಸಂಬಂಧಿಸಿದಂತೆ ನಮೂನೆ ಮತ್ತು ಶೀರ್ಷಿಕೆಗಳ ವಿವರವನ್ನು ಇ–ಮೇಲ್ (E-mail) ಮೂಲಕ ರವಾನಿಸಲಾಗಿದೆ. **ಈ ಸುತ್ತೋಲೆಯೊಂದಿಗೆ ಇರುವ ನಮೂನೆಗಳು ಪಠ್ಯಪುಸ್ತಕಗಳ ಶೀರ್ಷಿಕೆಗಳನ್ನು ಒಳಗೊಂಡಿರುತ್ತವೆ. ನೀಡಲಾಗಿರುವ ನಮೂನೆಗಳು ಮತ್ತು ಶೀರ್ಷಿಕೆಗಳನ್ನು ಯಾವುದೇ ಕಾರಣಕ್ಕೂ ಬದಲಾಯಿಸಬಾರದು.** ರಾಜ್ಯ ಹಂತದಲ್ಲಿ (Soft Copy) ಸಾಫ್ಟ್ ಪ್ರತಿ ಮೂಲಕ ಇದೇ ನಮೂನೆಯಲ್ಲಿ ಕ್ರೋಢೀಕರಣ ಮಾಡಬೇಕಿರುತ್ತದೆ. ಆದ್ದರಿಂದಾಗಿ ಬದಲಾಯಿಸದಿರಲು ತಿಳಿಸಿದೆ.

**2014–15ನೇ ಸಾಲಿನಲ್ಲಿ ಕಂಡುಬಂದಂತಹ ಕೆಲವು ನ್ಯೂನತೆಗಳು ಇಂತಿವೆ.**

* ಕೆಲವು ಶೀರ್ಷಿಕೆಗಳಿಗೆ ಬೇಡಿಕೆ ಸಲ್ಲಿಸದೇ ಇದ್ದು, ನಂತರ ಪುಸ್ತಕ ಕೋರಿರುವುದನ್ನು ಗಮನಿಸಿದೆ.

* ಇಡೀ ಜಿಲ್ಲೆಯಲ್ಲಿಯೇ ಇಲ್ಲದಿರುವ ಮಾಧ್ಯಮದ ಪುಸ್ತಕಗಳಿಗೆ ಬೇಡಿಕೆ ಸಲ್ಲಿಸಿರುವುದು.

* ಉಳಿಕೆ ಪುಸ್ತಕಗಳೇ ಸಾಕಾಗುವಷ್ಟು ಇದ್ದರೂ ಬೇಡಿಕೆ ಸಲ್ಲಿಸಿರುವುದು.

ಈ ರೀತಿಯ ಕೆಲವು ನ್ಯೂನತೆಗಳನ್ನು ಗಮನಿಸಿದ್ದು 2015–16ರಲ್ಲಿ ನ್ಯೂನತೆ ರಹಿತವಾದ ಬೇಡಿಕೆಯನ್ನು ನಿರೀಕ್ಷಿಸಲಾಗಿದೆ.

**ಬೇಡಿಕೆ ಸಿದ್ದಪಡಿಸುವ ಸಮಯದಲ್ಲಿ ಗಮನಿಸಬೇಕಾದ ಅಂಶಗಳು.**

**(1) ಬೇಡಿಕೆ ಸಲ್ಲಿಸುವ ನಮೂನೆಗಳು:–**

**ನಮೂನೆ–1:** 2015–16ನೇ ಸಾಲಿನ **ಉಚಿತ ಪಠ್ಯಪುಸ್ತಕಗಳ** ಪೂರ್ಣ ಪ್ರಮಾಣದ (Gross Indent) ಬೇಡಿಕೆಯಾಗಿದೆ. ಈ ನಮೂನೆಯಲ್ಲಿ ತಾಲ್ಲೂಕುವಾರು ಮತ್ತು ಜಿಲ್ಲಾ ಕ್ರೋಢೀಕರಣದ ಬೇಡಿಕೆಯು ಇರಬೇಕಿದೆ. ತಾಲ್ಲೂಕಿನಲ್ಲಿರುವ 1ರಿಂದ 10ನೇ ತರಗತಿಯವರೆಗಿನ ಎಲ್ಲ ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳು, ಸಮಾಜ ಕಲ್ಯಾಣ ಇಲಾಖೆಯ ಅಧೀನಕ್ಕೆ ಒಳಪಡುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಡೆಸಲಾಗುತ್ತಿರುವ ಮೊರಾರ್ಜಿ ದೇಸಾಯಿ/, ಕಿತ್ತೂರು ರಾಣಿ ಚೆನ್ನಮ್ಮ/ ಏಕಲವ್ಯ/ ಅಟಲ್ ಬಿಹಾರಿ ವಾಜಪೇಯಿ

ಶಾಲೆ/ ಆಶ್ರಮ, ವಸತಿ ಶಾಲೆಗಳು ಹಾಗೂ ಆರ್.ಎಂ.ಎಸ್.ಎ ಶಾಲೆಗಳ ಬೇಡಿಕೆ ಸೇರಬೇಕಿದೆ.
–2–



**ನಮೂನೆ–2:** 2015–16ನೇ ಸಾಲಿನ **ಮಾರಾಟ** ಪಠ್ಯಪುಸ್ತಕಗಳ ಪೂರ್ಣ ಪ್ರಮಾಣದ (Gross) ಬೇಡಿಕೆಯಾಗಿದೆ. ಈ ನಮೂನೆಯಲ್ಲಿ ತಾಲ್ಲೂಕಿನಲ್ಲಿರುವ 1 ರಿಂದ 10ನೇ ತರಗತಿಯವರೆಗಿನ ಎಲ್ಲ ಅನುದಾನ ರಹಿತ ಶಾಲೆಗಳು, ಸಿ.ಬಿ.ಎಸ್.ಇ. ಶಾಲೆಗಳು, ಬಿ.ಬಿ.ಎಂ.ಪಿ ಶಾಲೆಗಳ ಮಾರಾಟ ಪುಸ್ತಕಗಳು ಮತ್ತು ಇತರೆ ಬೇಡಿಕೆಯ ಪುಸ್ತಕಗಳು ಸೇರಬೇಕಿದೆ.

**ನಮೂನೆ–3:** ಇದು ಜಿಲ್ಲೆಯಲ್ಲಿರುವ ವಿವಿಧ ರೀತಿಯ ಶಾಲೆಗಳ ಸಂಖ್ಯೆ ಮತ್ತು ತರಗತಿವಾರು ಮಕ್ಕಳ ಸಂಖ್ಯೆಯನ್ನು ನಮೂದಿಸಬೇಕಿದೆ. ಈ ಸಂಖ್ಯೆಯು ಜುಲೈ–2014ರ ಅಂತ್ಯದಲ್ಲಿರುವಂತೆ ಇರಲಿ.

**ನಮೂನೆ–4:** ಈ ನಮೂನೆಯು **ಉಚಿತ ಪಠ್ಯಪುಸ್ತಕಗಳ** ವಾಸ್ತವ (Net Indent) ಬೇಡಿಕೆಯಾಗಿರುತ್ತದೆ. ಇದರಲ್ಲಿ ಕಾಲಂ 4ರಲ್ಲಿ ಒಟ್ಟು ಬೇಡಿಕೆ ಇದ್ದು ಕಾಲಂ 5ರಲ್ಲಿ ಸಂಬಂಧಿಸಿದ ಶೀರ್ಷಿಕೆಯ ಪುಸ್ತಕಗಳು ಉಳಿಕೆ ಇದ್ದಲ್ಲಿ ನಮೂದಿಸುವುದು. ಕಾಲಂ 6ರಲ್ಲಿ ವಾಸ್ತವ ಬೇಡಿಕೆ ಬರುತ್ತದೆ. ಅಂದರೆ ಕಾಲಂ 4–5=6
ಆಗಿದೆ. ಕಾಲಂ 6ರಲ್ಲಿ ನಮೂದಿಸಿರುವ ಸಂಖ್ಯೆಯ ಪುಸ್ತಕಗಳು ಮಾತ್ರ ನಿಮಗೆ ಮುದ್ರಕ'ರಿಂದ ಸರಬರಾಜಾಗುತ್ತವೆ.

**ನಮೂನೆ–5:** ಈ ನಮೂನೆಯು **ಮಾರಾಟ** ಪಠ್ಯಪುಸ್ತಕಗಳ ವಾಸ್ತವ ಬೇಡಿಕೆಯಾಗಿರುತ್ತದೆ. ಇಲ್ಲಿಯೂ ಶೀರ್ಷಿಕೆ ಉಳಿಕೆ ಇದ್ದಲ್ಲಿ ನಮೂದಿಸಬೇಕಿದೆ.

ಮಾರಾಟ ಪಠ್ಯ ಪುಸ್ತಕಗಳು ಮತ್ತು ಮಾರಾಟದ ಅಭ್ಯಾಸದ ಪುಸ್ತಕಗಳ ಬೇಡಿಕೆಯನ್ನು ಶಾಲೆಗಳಿಂದ ಪಡೆದು
ನಮೂದಿಸುವುದು ಈ ಪುಸ್ತಕಗಳು ತಾಲ್ಲೂಕುಗಳ ಬೇಡಿಕೆಯಲ್ಲಿನ ಶೇ 5ಕ್ಕಿಂತ' ಹೆಚ್ಚಿನಪ್ರಮಾಣದಲ್ಲಿ ಉಳಿಕೆಯಾದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಹೊಣೆ ಮಾಡಲಾಗುವುದು. ಅಂತಯೇ ಕೊರತೆ ಆಗದಂತೆ ಎಚ್ಚರವಹಿಸುವುದು. ಆದ್ದರಿಂದ ಬೇಡಿಕೆಯನ್ನು ಅಂತಿಮಗೊಳಿಸುವ ಮುನ್ನ ಸಮರ್ಪಕವಾಗಿ ಪರಿಶೀಲಿಸಿಕೊಂಡು ನಂತರ ಅಂತಿಮಗೊಳಿಸಲು ತಿಳಿಸಿದೆ.

**ನಮೂನೆ–6:** ನೋಡಲ್ ಅಧಿಕಾರಿಗಳ ವಿಳಾಸ ಮಳಿಗೆ ವಿಳಾಸವನ್ನು ನಮೂದಿಸುವುದು.

2) 2014–15ನೇ ಸಾಲಿನಲ್ಲಿ ವಿತರಿಸಿರುವ ಪುಸ್ತಕಗಳ ಸಂಖ್ಯೆ, 2015–16ರ ಬೇಡಿಕೆ ಸಂಖ್ಯೆ ಮತ್ತು ಡೈಸ್ ಅಂಶಗಳನ್ನು ಪರಿಶೀಲಿಸಲಾಗುವುದು. ಈ ವ್ಯತ್ಯಾಸವು ಶೇ.2 ರೊಳಗೆ ಇದ್ದಲ್ಲಿ ಪರಿಶೀಲಿಸಬಹುದಾಗಿದೆ. ಇದನ್ನು ಮೀರಿದ್ದರೆ ಉಪ ನಿರ್ದೇಶಕರು, ವ್ಯತ್ಯಾಸದ ಕುರಿತು ತಮ್ಮ ಅಭಿಪ್ರಾಯ ನೀಡಲು ತಿಳಿಸಿದೆ.

3) ಬೇಡಿಕೆಯನ್ನು ಅಂತಿಮಗೊಳಿಸುವವರೆಗೂ ಅನುದಾನಕ್ಕೊಳಪಟ್ಟ ಖಾಸಗಿ ಶಾಲೆಗಳಿಗೆ ಉಚಿತ ಬೇಡಿಕೆಯಲ್ಲಿ ಸಲ್ಲಿಸುವುದು.

4) 2015–16ನೇ ಸಾಲಿನ ಬೇಡಿಕೆ ಸಿದ್ದಪಡಿಸುವಲ್ಲಿ 2014–15ರಲ್ಲಿ ವಿತರಿಸಿರುವ ಪುಸ್ತಕಗಳನ್ನು ಆಧಾರವಾಗಿಟ್ಟುಕೊಳ್ಳಬಹುದಾಗಿದೆ.

5) ಇಲಾಖಾಧಿಕಾರಿಗಳು ನೀಡುವ ಬೇಡಿಕೆ ಆಧರಿಸಿ ಪಠ್ಯಪುಸ್ತಕಗಳು ಮುದ್ರಣವಾಗುವುದರಿಂದ ಬೇಡಿಕೆಯನ್ನು ಸಿದ್ಧಪಡಿಸುವಾಗ ಅತ್ಯಂತ ಗಂಭೀರವಾಗಿ ಪರಿಶೀಲಿಸುವುದು. ಯಾವುದೇ ಕಾರಣಕ್ಕೂ ಉಚಿತ ಪುಸ್ತಕವಾಗಲಿ ಅಥವಾ ಮಾರಾಟ ಪುಸ್ತಕವಾಗಲಿ ಕೊರತೆ ಬಾರದಂತೆ ಕ್ರಮವಹಿಸುವುದು. ಅದೇ ರೀತಿ



ಅನಗತ್ಯವಾಗಿ ಹೆಚ್ಚುವರಿ ಪುಸ್ತಕಗಳು ಉಳಿಕೆಯಾಗಬಾರದು. ಇದರಿಂದಾಗಿ ವಿನಾಕಾರಣ ವೆಚ್ಚವಾಗುವ ಸಾರ್ವಜನಿಕ ಹಣಕ್ಕೆ ನೀವೇ ಹೊಣೆಗಾರರು ಎಂಬುದನ್ನು ಈ ಮೂಲಕ ತಿಳಿಯಪಡಿಸಿದೆ.

ಬೇಡಿಕೆಯನ್ನು ಸಿದ್ದಪಡಿಸಿ ಸಮಗ್ರವಾಗಿ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಪರಿಶೀಲಿಸಿ Soft ಪ್ರತಿಯನ್ನು ಕಡ್ಡಾಯವಾಗಿ ddpiktbs@gmail.com ಈ E-mail ಗೆ ದಿನಾಂಕ:18–08–2014ರೊಳಗೆ ಕಳುಹಿಸುವುದು.

**ಸಹಿ/–**
**ವ್ಯವಸ್ಥಾಪಕ ನಿರ್ದೇಶಕರು**
**ಕರ್ನಾಟಕ ಪಠ್ಯ ಪುಸ್ತಕ ಸಂಘ (ರಿ)**

**ಪ್ರತಿಯನು,**

1) ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಆಡಳಿತ) ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ
2) ಜಿಲ್ಲಾ ಪಠ್ಯ ಪುಸ್ತಕ ನೋಡಲ್ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
3) ಈ ಕಚೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಅನುಪಾಲನೆಗಾಗಿ
4) ಕಚೇರಿ ಪ್ರತಿ.